"ಮಧುರ ಮಕ್ಕಳೇ- ಸರ್ವೀಸಿನ ಹೊಸ-ಹೊಸ ಅನ್ವೇಷಣೆ ಮಾಡಿ, ಸೇವೆಯ ವಿಸ್ತಾರವನ್ನು ಮಾಡಿ, ಸೇವಾಕ್ಷೇತ್ರದಲ್ಲಿ ಮಾತೆಯರನ್ನು ಮುಂದಿಡುವುದೇ ಸಫಲತೆಗೆ ಸಾಧನವಾಗಿದೆ"

ಪ್ರಶ್ನೆ: ಯಾವ ಗೌರವವನ್ನಿಟ್ಟುಕೊಂಡು ಮಾತನಾಡಿದಾಗ ಅಧಿಕಾರದ ಮಾತುಗಳನ್ನು ತಾವು ಸಿದ್ಧ ಮಾಡಲು ಸಾಧ್ಯ?

ಉತ್ತರ: ಎಂದೂ ಯಾರೇ ದೊಡ್ಡವರ ಜೊತೆ ಮಾತನಾಡುವಾಗ ತಾವು-ತಾವು ಎಂದು ಸಂಭೋಧಿಸಬೇಕು. ನೀನು-ನೀನು ಎನ್ನಬಾರದು. ಇದೂ ಸಹ ಮರ್ಯಾದೆಯಾಗಿದೆ. ತಾವು ತಮ್ಮ ಅಧಿಕಾರದಿಂದ ಹೇಳಿ ಆದರೆ ಅವಶ್ಯವಾಗಿ ಗೌರವವನ್ನೂ ಕೊಡಿ. ಶಾಲೆಯಲ್ಲಿಯೂ ಸಹ ಇದನ್ನು ಕಲಿಸಿಕೊಡುತ್ತಾರೆ. 2. ಎಂದೂ ಸಹ ಅಹಂಕಾರದಿಂದ ಮಾತನಾಡಬಾರದು. ಜ್ಞಾನದ ನಶೆಯಲ್ಲಿ ಸದಾ ಹರ್ಷಿತಮುಖಿಗಳಾಗಿ. ಹರ್ಷಿತವಾದ ಚಹರೆಯೂ ಸಹ ಬಹಳ ಸೇವೆಯನ್ನು ಮಾಡುತ್ತದೆ.

ಗೀತೆ: ಇಂದಿನ ಈ ಮನುಷ್ಯರಿಗೆ..........

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳಿಗೆ ಇದನ್ನು ತಿಳಿಸಲಾಗಿದೆ- ಬಹಳ ಪಾಪಾತ್ಮರಾಗಿದ್ದಾರೆ. ಒಳ್ಳೆಯ ಮಕ್ಕಳು ಕೂಗುತ್ತಾರೆ- ಪಾಪ ಬಹಳ ಆಗಿದೆ. ಪಾಪದಿಂದಲೇ ಮನುಷ್ಯರು ಪತಿತರಾಗಿದ್ದಾರೆ. ಪಾಪಾತ್ಮರನ್ನು ಪುಣ್ಯಾತ್ಮರನ್ನಾಗಿ ಮಾಡಲು ಹೇ ಪತಿತ-ಪಾವನ ಬನ್ನಿ ಎಂದು ನೆನಪನ್ನೂ ಸಹ ಮಾಡುತ್ತಾರೆ. ಇದು ಪತಿತ ಜಗತ್ತಾಗಿದೆ ಅಂದಮೇಲೆ ಖಂಡಿತ ಯಾವುದೋ ಪಾವನ ಜಗತ್ತೂ ಸಹ ಇದೆ. ನಿರಾಕಾರಿ ಜಗತ್ತಿಗೆ ಪಾವನ ಜಗತ್ತೆಂದು ಹೇಳುವುದಿಲ್ಲ. ಅದು ಶಾಂತಿಧಾಮವಾಗಿದೆ. ಪತಿತ ಮತ್ತು ಪಾವನ ಜಗತ್ತು ಮನುಷ್ಯರಿಗಾಗಿಯೇ ಇದೆ. ಕಲಿಯುಗೀ ಜಗತ್ತಿನಲ್ಲಿ ಪತಿತರಿದ್ದಾರೆ. ಸತ್ಯಯುಗೀ ಜಗತ್ತಿನಲ್ಲಿ ಪಾವನರು, ಪತಿತ-ಪಾವನ ತಂದೆಯೇ ಪಾವನ ಪ್ರಪಂಚದ ಸ್ಥಾಪನೆ ಮಾಡುತ್ತಾರೆ. ವಿದ್ವಾಂಸರು, ಪಂಡಿತರು ಶಾಸ್ತ್ರಗಳನ್ನು ಮಾಡಿ ವ್ಯಾಸನ ಹೆಸರನ್ನಿಟ್ಟಿದ್ದಾರೆ. ವ್ಯಾಖ್ಯಾನ ಮಾಡಿದವರ ಹೆಸರಂತೂ ಬೇಕಲ್ಲವೆ. ಶಾಸ್ತ್ರಗಳು ಯಾವಾಗ ಆಯಿತೆಂಬುದು ಮನುಷ್ಯರಿಗೆ ಗೊತ್ತಿಲ್ಲ. ಸತ್ಯಯುಗ-ತ್ರೇತಾಯುಗದಲ್ಲಿ ಶಾಸ್ತ್ರ ಇತ್ಯಾದಿಗಳು ಇರುವುದಿಲ್ಲ ಎಂದು ನೀವು ಮಕ್ಕಳಿಗೆ ಗೊತ್ತಿದೆ. ಅಲ್ಲಿ ಭಕ್ತಿಮಾರ್ಗದ ಯಾವುದೇ ಗುರುತೂ ಸಹ ಇಲ್ಲ. ತಂದೆಯು ಜ್ಞಾನದಿಂದ ಜಯ-ಜಯಕಾರವನ್ನು ಮಾಡುತ್ತಾರೆ. ಜ್ಞಾನದಿಂದ 21 ಜನ್ಮಗಳು ಬದುಕಿರುತ್ತೀರಿ ಮತ್ತೆ ಮಾಯೆಯು ಬಂದು ಶವವನ್ನಾಗಿ ಮಾಡುತ್ತದೆ. ಇದು ಶವಗಳ ಪ್ರಪಂಚವಾಗಿದೆ. ಇದಕ್ಕೆ ಶ್ಮಶಾನ ಎನ್ನಲಾಗಿದೆ. ಬುದ್ಧಿಯಂತೂ ಎಲ್ಲರದೂ ನಶಿಸುತ್ತಿರುತ್ತದೆ. ಮಹಾಭಾರಿ ಯುದ್ಧದಲ್ಲಿ ಪೂರ್ಣ ಶ್ಮಶಾನವಾಗುತ್ತದೆ. ಬೇರೆಯುದ್ಧಗಳಲ್ಲಿ ಈ ರೀತಿಯಾಗುವುದಿಲ್ಲ. ಜ್ಞಾನಸಾಗರನ ಎಲ್ಲಾ ಮಕ್ಕಳು ಸ್ಮಶಾನವಾಸಿಗಳಾಗುತ್ತಾರೆ ಎಂದು ಭಾಗವತದಲ್ಲಿ ಬರೆಯಲಾಗಿದೆ. ಮಾಯೆಯು ಕಾಮಚಿತೆಯ ಮೇಲೆ ಕೂರಿಸಿ ಎಲ್ಲರನ್ನೂ ಭಸ್ಮೀಭೂತರನ್ನಾಗಿ ಮಾಡಿದೆ. ಎಲ್ಲರೂ ಸ್ಮಶಾನವಾಸಿಗಳಾಗಿದ್ದಾರೆ. ಮುಸಲ್ಮಾನರ ಕುರಾನ್ನಲ್ಲಿಯೂ ಸ್ಮಶಾನವಾಗುತ್ತದೆ ಎಂಬ ಮಾತಿದೆ. ಯಾವಾಗ ವಿನಾಶದ ಸಮಯವಾಗುತ್ತದೆಯೋ ಆಗ ಅವರನ್ನು ಎಚ್ಚರಿಸಲು ಅಲ್ಲಾಹ್ ಬರುತ್ತಾರೆ. ಶ್ಮಶಾನವನ್ನು ಪರಿಸ್ಥಾನವನ್ನಾಗಿ ಮಾಡುತ್ತಾರೆ. ಬಿರ್ಲಾಮಂದಿರದಲ್ಲಿಯೂ ಸಹ ಬರೆಯಲಾಗಿದೆ- ದೆಹಲಿಯನ್ನು ಪರಿಸ್ಥಾನವನ್ನಾಗಿ ಮಾಡಲಾಯಿತು. ಅಂದಮೇಲೆ ಅವಶ್ಯವಾಗಿ ಶ್ಮಶಾನವನ್ನು ಪರಿಸ್ಥಾನವನ್ನಾಗಿ ಮಾಡಲಾಗುತ್ತದೆ. ಪ್ರಳಯವಂತೂ ಆಗುವುದಿಲ್ಲ ಆದರೆ ಅನೇಕರು ಸಾಯುತ್ತಾರೆ. ಸತ್ಯಯುಗದಲ್ಲಿ ಇರುವುದೇ ಕಡಿಮೆ ಮನುಷ್ಯರು, ಒಂದೇ ಆದಿಸನಾತನ ದೇವಿ-ದೇವತಾ ಧರ್ಮವಿರುತ್ತದೆ. ಅಲ್ಲಿ ಇಂತಹ ಸ್ಥಿತಿಯಿರುವುದಿಲ್ಲ. ಸ್ವರ್ಗದಲ್ಲಿ ಯಾರು ಯಾರಿಗೂ ದುಃಖ ಕೊಡುವುದಿಲ್ಲ. ಇಲ್ಲಿ ಎಷ್ಟೋಂದು ದುಃಖ ಕೊಡುತ್ತಾರೆ. ಒಬ್ಬರನ್ನೊಬ್ಬರು ಕೊಲೆ ಮಾಡುತ್ತಾರೆ. ಬಾಬನ ಬಳಿ ಎಲ್ಲಾ ಸಮಾಚಾರವಂತೂ ಬರುತ್ತದೆಯಲ್ಲವೆ. ಬೇರೆ ಯಾವುದಾದರೂ ಸ್ತ್ರೀಯ ಮೇಲೆ ಮೋಹ ಬಂದರೆ ತಮ್ಮ ಸ್ತ್ರೀಯನ್ನು ಸಮಾಪ್ತಿ ಮಾಡಿಬಿಡುತ್ತಾರೆ. ವಿಷ ಇತ್ಯಾದಿಯನ್ನು ಕೊಡುತ್ತಾರೆ. ಇದು ಪತಿತ ಜಗತ್ತಾಗಿದೆ. ಅದಕ್ಕಾಗಿಯೇ ಹೇ! ಪತಿತ-ಪಾವನ ಬನ್ನಿ ಎಂದು ಹಾಡುತ್ತಾರೆ ಆದರೆ ಸ್ವಯಂನ್ನು ಪತಿತರೆಂದು ತಿಳಿದುಕೊಳ್ಳುವುದಿಲ್ಲ. ಯಾರಿಗಾದರೂ ನೀವು ಪತಿತರೆಂದು ಹೇಳಿದರೆ ಸಿಟ್ಟಾಗುತ್ತಾರೆ. ಈಗ ನಾವೆಲ್ಲಾ ಪತಿತರಾಗಿದ್ದೆವು ಎಂಬುದು ತಮಗೆ ಗೊತ್ತಿದೆ. ತಂದೆಯು ಪಾವನ ಮಾಡುತ್ತಿದ್ದಾರೆ. ಈಗ ಇದನ್ನು ಜಗತ್ತಿಗೆ ಹೇಳಬೇಕು- ಪತಿತರನ್ನು ಪಾವನ ಮಾಡುವವರು ಶಿವತಂದೆಯಾಗಿದ್ದಾರೆ. ಯಾರ ಜಯಂತಿಯನ್ನು ತಾವು ಆಚರಿಸುತ್ತಿದ್ದೀರೋ ಅವರು ಬಂದಿದ್ದಾರೆ. ಮೊದಲು ಕಾಯಿದೆಯಿತ್ತು- ಯಾವುದೇ ಹೊಸ ಸಂಶೋಧನೆಯನ್ನು ಎಲ್ಲರಿಗೂ ಹೇಳಬೇಕು. ಪರಸ್ಪರದಲ್ಲಿ ಸೇರಿ ಆಜ್ಞೆಯನ್ನು ಹೊರಡಿಸಿ ಸಾವಿರಾರು ಜನರ ಸಹಿಯನ್ನು ಪಡೆದು ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕು. ಸಂಶೋಧನೆಯ ಪ್ರಚಾರವನ್ನು ಮಾಡಲು ದೊಡ್ಡವರಿಗೆ ಹೇಳಲಾಗುತ್ತದೆ ಮತ್ತೆ ಅವರು ವ್ಯವಸ್ಥೆಯನ್ನು ಮಾಡುತ್ತಾರೆ. ಅಂದಮೇಲೆ ತಾವೂ ಸಹ ಈ ರೀತಿ ಮಾಡಬೇಕು. ಯಾರ ಜನ್ಮದಿನ ಬರುತ್ತದೆಯೋ ಅವರು ತಿಳಿದುಕೊಳ್ಳುತ್ತಾರೆ. ಮಾತು ಸರಿಯೆನಿಸುತ್ತದೆ. ಇಂದಿಗೆ 5000 ವರ್ಷಗಳ ಮೊದಲು ತಂದೆ ಬಂದಿದ್ದರು ಯಾವ ಭಾರತ ಸರ್ವಶ್ರೇಷ್ಠವಾಗಿತ್ತು, ಚಿನ್ನದ ಪಕ್ಷಿಯಾಗಿತ್ತು ಅದು ಸಂಪೂರ್ಣ ಕವಡೆಯ ಸಮಾನವಾಗಿದೆ. ಅದನ್ನು ಮತ್ತೆ ಪರಮಪಿತ ಪರಮಾತ್ಮ ವಜ್ರಸಮಾನ ಮಾಡುತ್ತಾರೆ. ಬ್ರಹ್ಮಾರವರ ಮೂಲಕ ಈ ಜ್ಞಾನವನ್ನು ಹೇಳುತ್ತಿದ್ದಾರೆ.

ವಾಸ್ತವದಲ್ಲಿ ಪ್ರತಿಯೊಬ್ಬ ಮನುಷ್ಯನು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದಾರೆ ಎಂಬುದನ್ನು ನೀವು ತಿಳಿಸಬಹುದು. ಇದು ಮನೆತನದ ಹೆಸರಾಗಿದೆ. ಬ್ರಹ್ಮನಿಂದಲೇ ಬ್ರಾಹ್ಮಣಧರ್ಮದ ರಚನೆಯಾಗುತ್ತದೆ ನಂತರ ದೇವತಾ, ಕ್ಷತ್ರಿಯ, ಶೂದ್ರ ಈ ಎಲ್ಲಾ ವಂಶವಾಗುತ್ತದೆ ಅಂದಮೇಲೆ ತಾವು ಈ ಹಬ್ಬಗಳ ವಿಚಾರವಾಗಿ ಚೆನ್ನಾಗಿ ತಿಳಿಸಬಹುದು. ದೀಪಾವಳಿ ಬರುತ್ತದೆ, ಇದಂತೂ ತಮಗೆ ಗೊತ್ತಿದೆ- ಈಗ ಮನೆ-ಮನೆಯಲ್ಲಿ ಸಂಪೂರ್ಣ ಘೋರ ಅಂಧಕಾರವಾಗಿದೆ. ಜ್ಞಾನಸೂರ್ಯ ಪ್ರಕಟವಾದಾಗ ಅಜ್ಞಾನ ಅಂಧಕಾರವು ವಿನಾಶವಾಗುತ್ತದೆ ಎಂದು ತಿಳಿಯುವುದರಿಂದಲೇ ಎಲ್ಲರ ಜ್ಯೋತಿ ಬೆಳಗುತ್ತದೆ. ಅವರಿಗೆ ಪರಮಜ್ಯೋತಿ ಎನ್ನಲಾಗುತ್ತದೆ ಅಂದಮೇಲೆ ಅಂತಹ ಮುಖ್ಯ ಹಬ್ಬದಲ್ಲಿ ತಾವು ಬಹಳ ಚೆನ್ನಾಗಿ ತಿಳಿಸಬೇಕು. ತಾವು ಸರ್ಕಾರಕ್ಕೂ ತಿಳಿಸಿ. ತಾವು ಈಗ ಮುಂದುವರೆಯಬೇಕು. ಮಾತೆಯರನ್ನು ಮುಂದಿಡಬೇಕು. ಇದರಲ್ಲಿ ಪುರುಷರಿಗೆ ನಾಚಿಕೆ ಆಗಬಾರದು. ತಾವು ಹೇಗೆ ಜಾಗೃತಗೊಳಿಸಬೇಕು ಎನ್ನುವುದನ್ನು ತಂದೆಯು ತಿಳಿಸುತ್ತಾರೆ. ಪರಸ್ಪರ ಸೇರಿ ಸಹಿ ಮಾಡಿಸಿಕೊಂಡು ನಂತರ ತಿಳಿಸಬೇಕು. ತಾವು ವಾಸ್ತವದಲ್ಲಿ ಪ್ರತಿಯೊಬ್ಬರೂ ಸಹ ಶಿವನ ಮಕ್ಕಳಾಗಿದ್ದೀರಿ. ಎಲ್ಲರೂ ಶಿವ ಎಂದಲ್ಲ. ತಂದೆಯು ಒಬ್ಬರೇ ಆಗಿದ್ದಾರೆ. ಅವರು ರಚೈತ, ಪತಿತರನ್ನು ಪಾವನ ಮಾಡುವಂತಹವರು. ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕು. ಯಾರು ಮುಖ್ಯಸ್ತರಿದ್ದಾರೆ ಅವರಿಗೆ ತಿಳಿಸಬೇಕು. ತಾವು ಮನುಷ್ಯರನ್ನು ಎಚ್ಚರಿಸುತ್ತೀರಿ, ಗಂಗೆಯಲ್ಲಿ ಸ್ನಾನ ಮಾಡುವುದರಿಂದ ಪಾವನರಾಗುತ್ತಾರೆ ಎಂದು ಮನುಷ್ಯರು ತಿಳಿದಿದ್ದಾರೆ ಆದರೆ ಗಂಗೆ ಪತಿತ-ಪಾವನಿಯಲ್ಲ. ಪತಿತ-ಪಾವನ ಒಬ್ಬರೇ ನಿರಾಕಾರನಾಗಿದ್ದಾರೆ. ಜ್ಞಾನದ ಮಳೆ ಸುರಿಸುವಂತಹ ಜ್ಞಾನಸಾಗರ ಅವರೆ ಆಗಿದ್ದಾರೆ. ಬಾಕಿ ಎಲ್ಲವೂ ಅಂಧಶ್ರದ್ಧೆಯಾಗಿದೆ. ಈಗ ತಾವು ಮಕ್ಕಳಿಗೆ ಅಧಿಕಾರ ಸಿಕ್ಕಿದೆ. ಕುಮಾರಿಯರ ಮೂಲಕ ಬಾಣವನ್ನು ಹೊಡೆಸಿದರು ಎಂದು ಶಾಸ್ತ್ರಗಳಲ್ಲಿ ಬರೆಯಲಾಗಿದೆ. ಒಳ್ಳೊಳ್ಳೆಯ ಮಕ್ಕಳು ಕೆಲಸ ಮಾಡಬಹುದು, ಭಾಷಣ ಇತ್ಯಾದಿಯನ್ನು ಮಾಡಬಹುದು, ಸೇನೆಯಲ್ಲಿ ನಂಬರ್ವಾರಂತೂ ಇರುತ್ತದೆಯಲ್ಲವೆ. ಮಾತನಾಡುವುದರಲ್ಲಿ ಗೌರವ ಇರಬೇಕು. ತಮಗಿಂತ ದೊಡ್ಡವರಿಗೆ ಸದಾ ತಾವು-ತಾವು ಎಂದು ಸಂಭೋಧಿಸಲಾಗುತ್ತದೆ ಆದರೆ ಅವಿದ್ಯಾವಂತ ಮಕ್ಕಳು ತಾವು ಎನ್ನುವುದರ ಬದಲು ನೀನು-ನೀನು ಎಂದು ಸಂಭೋಧಿಸುತ್ತಾರೆ. ಓದಿಸಿ ಪದವಿಯನ್ನು ಪಡೆಯಲು ಯೋಗ್ಯರನ್ನಾಗಿ ಮಾಡುತ್ತಾರೆ. ನಡುವಳಿಕೆಯನ್ನೂ ಸಹ ರಿಜಿಸ್ಟರ್ನಲ್ಲಿ ಬರೆಯುತ್ತಾರೆ. ಈಗಿನ ಕಾಲದಲ್ಲಿ ಅಂತಹ ಒಳ್ಳೆಯ ನಡುವಳಿಕೆಯುಳ್ಳವರೇ ಇಲ್ಲ. ಜಗತ್ತಿನಲ್ಲಿ ಸಂಪೂರ್ಣ ಕೊಳಕಿದೆ. ಹಾಡಿನಲ್ಲಿಯೂ ಕೇಳಿದಿರಿ- ಮನುಷ್ಯನ ಸ್ಥಿತಿಯು ಹೇಗಿದೆ ಎಂದು. ತಾವು ಮಕ್ಕಳಿಗೆ ಗೊತ್ತಿದೆ- ಅಹೋ ನಮ್ಮ ಭಾರತ ಎಂದು ಯಾರು ಹೇಳುತ್ತಾರೆ. ಭಾರತ ಸ್ವರ್ಗವಾಗಿತ್ತು, ಸನ್ಯಾಸಿಗಳು ಇದೆಲ್ಲಾ ನಿಮ್ಮ ಕಲ್ಪನೆಯೆಂದು ಹೇಳುತ್ತಾರೆ. ಅವರಿಗೆ ಸ್ವರ್ಗವೆಂದರೆ ಏನು ಎಂದು ಗೊತ್ತಿದೆಯೇ? ಕೆಲವರು ನೋಡಿ ಬಹಳ ಖುಷಿಯಾಗುತ್ತಾರೆ. ಈ ಚಿತ್ರ ಬಹಳ ಚೆನ್ನಾಗಿದೆ. ಪಾಂಡವರ ದೊಡ್ಡ-ದೊಡ್ಡ ಚಿತ್ರವನ್ನು ಮಾಡುತ್ತಾರೆ. ಅಷ್ಟು ದೊಡ್ಡ ರೂಪ ಇರಲಿಲ್ಲ. ರಾವಣನನ್ನು ಎಷ್ಟು ದೊಡ್ಡದಾಗಿ 100 ಅಡಿಯ ಉದ್ದದ ಚಿತ್ರವನ್ನು ಮಾಡುತ್ತಾರೆ. ದಿನ ಕಳೆದಂತೆ ಚಿತ್ರ ದೊಡ್ಡದಾಗಿ ಮಾಡುತ್ತಾರೆ. ರಾವಣನ ಆಯಸ್ಸು ಧೀರ್ಘವಾಗಿದೆ. 2500 ವರ್ಷಗಳಾಯಿತು. ತಾವು ದಸರಾ ದಿನದ ಬಗ್ಗೆ ಚೆನ್ನಾಗಿ ತಿಳಿಸಬಹುದು. ಇದು ರಾವಣನ ರಾಜಧಾನಿಯಾಗಿದೆ. ಇದು ಭೂತದ ಜಗತ್ತು ಎನ್ನಲಾಗುತ್ತದೆ. ಪತ್ರಿಕೆಯಲ್ಲಿಯೂ ಸಹ ಇದು ಅಸುರೀ ಜಗತ್ತೆಂದು ಯಾರೋ ಹಾಕಿದ್ದರು. ಇದನ್ನು ಆಸುರೀ ರಾಜ್ಯ ಎಂದು ಏಕೆ ಹೇಳಿದ್ದಾರೆ. ತಂದೆಯೂ ಸಹ ಬಂದು ಇದು ಆಸುರೀ ಜಗತ್ತೆಂದು ಹೇಳಿದರು. ದೈವೀರಾಜ್ಯವಂತೂ ಸತ್ಯಯುಗದಲ್ಲಿ ಇರುತ್ತದೆ. ಈ ರೀತಿ ವಿಷಯಗಳನ್ನು ಹಂಚಿಕೊಳ್ಳಬೇಕು.

ಗುರಿಯಂತೂ ಸ್ಪಷ್ಟವಾಗಿದೆ. ಹೊರಗಡೆ ಬೋರ್ಡ್ ಮೇಲೂ ಸಹ ಗುರಿಯನ್ನು ಬರೆಯಲಾಗಿದೆ. ಆ ಶಾಲೆಯಲ್ಲಿ ಅಂಧಶ್ರದ್ಧೆಯಿಂದ ಕೇಳುತ್ತಾರೆ, ಏನೂ ಅರ್ಥವಿಲ್ಲ. ಈಗ ತಂದೆಯು ತಿಳಿಸುತ್ತಾರೆ- ಹೇ ಭಾರತವಾಸಿಗಳೇ, ತಾವು ದೊಡ್ಡ-ದೊಡ್ಡ ವೇದ-ಉಪನಿಷತ್ತು ಮುಂತಾದವುಗಳನ್ನು ಯಾವಾಗಿನಿಂದ ಓದುತ್ತಾ ಬಂದಿದ್ದೀರಿ? ಸತ್ಯಯುಗದಿಂದ ಎಂದು ಹೇಳುವುದಿಲ್ಲ. ಅಲ್ಲಿ ಭಕ್ತಿಮಾರ್ಗದ ಅಂಶವೂ ಇರುವುದಿಲ್ಲ. ಅರ್ಧಕಲ್ಪ ಬ್ರಹ್ಮನ ರಾತ್ರಿ, ಭಕ್ತಿಮಾರ್ಗ ಪ್ರಾರಂಭವಾಗುತ್ತದೆ. ಭಗವಂತ ಅವಶ್ಯವಾಗಿ ಬರುತ್ತಾರೆ, ಆಗಲೇ ಶಿವಜಯಂತಿಯನ್ನು ಆಚರಿಸಲಾಗುತ್ತದೆ. ಇಲ್ಲವೆಂದರೆ ಇವರು ನಿರಾಕಾರ ಹೇಗೆ ಬಂದರು? ಅವಶ್ಯವಾಗಿ ಶರೀರದ ಆಧಾರವನ್ನು ಪಡೆದಿರಬೇಕು. ತಮಗೆ ಗೊತ್ತಿದೆ- ತಂದೆಯು ಬ್ರಹ್ಮಾರವರ ತನುವಿನ ಆಧಾರವನ್ನು ಪಡೆಯುತ್ತಾರೆ. ಅವರು ಬರುವುದೇ ಭಾರತದಲ್ಲಿ. ತಂದೆಯ ಜನ್ಮವೇ ಭಾರತದಲ್ಲಾಗುತ್ತದೆ. ಬ್ರಹ್ಮನಜನ್ಮವೂ ಭಾರತದಲ್ಲಿಯೇ ಆಗುತ್ತದೆ. ಬಾಬಾ ವಿರಾಟರೂಪದ ಬಗ್ಗೆಯೂ ತಿಳಿಸಿದ್ದಾರೆ. ಈ ಬ್ರಾಹ್ಮಣ ಧರ್ಮವು ಶ್ರೇಷ್ಠವಾಗಿದೆ. ಈಗ ಪ್ರತ್ಯಕ್ಷವಾಗಿ ತಾವಿದ್ದೀರಿ. ತಾವು ಬ್ರಾಹ್ಮಣರ ಮೇಲೆ ನಿರಾಕಾರ ಶಿವತಂದೆಯಿದ್ದಾರೆ ನಂತರ ಬ್ರಹ್ಮಾರವರ ತನುವನ್ನು ತೋರಿಸಬೇಕು.ಈ ಬ್ರಾಹ್ಮಣ ಕುಲ, ದೇವತಾ ಕುಲ ಹಾಗೂ ಕ್ಷತ್ರಿಯ ಕುಲದಲ್ಲಿ ಇಷ್ಟಿಷ್ಟು ಜನ್ಮಗಳನ್ನು ಪಡೆಯುತ್ತಾರೆ. ಸಂಪೂರ್ಣ ಸ್ಪಷ್ಟವಾಗಿ ಸರಿಯಾಗಿ ಮಾಡಬಹುದು. ಬ್ರಹ್ಮನ ರಾತ್ರಿ, ಸರಸ್ವತಿಯ ರಾತ್ರಿ ಬ್ರಹ್ಮಾವಂಶಿಯರದೇ ರಾತ್ರಿಯಾಗಿದೆ. ಹಗಲಿನಲ್ಲಿ ಮತ್ತೆ ಎಲ್ಲಾ ಬ್ರಾಹ್ಮಣರು ದೇವತೆಗಳಾಗುತ್ತಾರೆ. ಧಾರಣೆ ಮಾಡಿಕೊಳ್ಳಲು ಮಕ್ಕಳಿಗೆ ಅನೇಕ ವಿಚಾರಗಳನ್ನು ತಿಳಿಸುತ್ತಾರೆ. ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಬಿಡುವ ರೀತಿ ಆಗಬಾರದು. ಬೇರೆ ಸತ್ಸಂಗಗಳಲ್ಲಿ ಕಥೆಗಳನ್ನು ಕೇಳಿ ಹೊರಟುಹೋಗುತ್ತಾರೆತಾನೇ. ಇಲ್ಲಿ ತಮಗೆ ಪ್ರತ್ಯಕ್ಷಫಲ ಸಿಗುತ್ತದೆ. ಈ ವಿದ್ಯೆಯಿಂದ ನಾವು ಮನುಷ್ಯರಿಂದ ದೇವತೆಗಳಾಗುತ್ತೇವೆ ಎಂಬುದು ಗೊತ್ತಿದೆ. ಅಲ್ಲಿ ಯಾವುದೇ ಗುರಿಯಿಲ್ಲ.

ತಂದೆಯು ಬಹಳಷ್ಟು ತಿಳಿಸುತ್ತಾರೆ ಆದರೆ ಕೆಲವರು ಮಾತ್ರ ಬರುತ್ತಾರೆ. ಕೆಲವರು ದ್ರೋಹಿಗಳೂ ಆಗಿಬಿಡುತ್ತಾರೆ. ಇದು ಯುದ್ಧದ

ಮೈದಾನವಾಗಿದೆ ಎಂದು ತಿಳಿಸಬೇಕು. ಮಾಯೆಯು ಬಹಳ ಪ್ರಬಲವಾಗಿದೆ, ಕೆಲವರು ಅನುತ್ತೀರ್ಣರಾಗುತ್ತಾರೆ. ಇದೂ ಸಹ ಡ್ರಾಮಾದ ಆಟವಾಗಿದೆ. ಎಲ್ಲರೂ ವಿಜಯಿಗಳಾಗಲು ಸಾಧ್ಯವೇ! ನಾವು ಮಾಯಾ ರಾವಣನಿಂದ ಸೋತಿದ್ದೆವೆಂಬುದು ನೀವು ಮಕ್ಕಳಿಗೆ ಗೊತ್ತಿದೆ. ಇದು ಸೋಲು-ಗೆಲುವಿನ ಆಟವಾಗಿದೆ. ನಿಮಗೆ ಗೊತ್ತಿದೆ- ನಾವು ಬಾಬಾನಿಂದ ವಿಶ್ವದ ಮಾಲೀಕರಾಗುತ್ತೇವೆ. ಈ ನಶೆಯು ಸ್ಥಿರವಾಗಿರಬೇಕು. ನಶೆಯು ಏಕೆ ಕಡಿಮೆಯಾಗುತ್ತದೆ ಎಂದರೆ, ವಿಶ್ವದ ರಚೈತ ತಂದೆಯಿಂದ ಓದುತ್ತಿದ್ದೇವೆ! ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮಿಯಾಗುತ್ತಿದ್ದೇವೆ! ವಿದ್ಯಾರ್ಥಿ ವಿದ್ಯೆ ಮತ್ತು ಓದಿಸುವವರನ್ನು ಮರೆತುಬಿಡುತ್ತಾರೆ! ಏಕೆ ಮರೆಯುತ್ತೀರಿ? ಮನೆಗೆ ಹೋಗುತ್ತಿದ್ದಂತೆಯೇ ಮರೆತುಬಿಡುತ್ತಾರೆ. ಇಲ್ಲಿ ಬಹಳ ನಿಶ್ಚಯಬುದ್ಧಿಯವರಾಗುತ್ತಾರೆ. ಎಷ್ಟೊಂದು ಆನಂದಬಾಷ್ಪಗಳು ಬರುತ್ತವೆ ಮತ್ತೆ ಇಲ್ಲಿಂದ ಮನೆಗೆ ಹೋದರೆ ಪತ್ರವನ್ನೂ ಬರೆಯುವುದಿಲ್ಲ. ಅನನ್ಯ ಮಕ್ಕಳು ಯಾರು ಮಾರ್ಗದರ್ಶಕರಾಗಿದ್ದಾರೆ ಅವರೂ ಸಹ ಮರೆತುಹೋಗುತ್ತಾರೆ. ಕೊನೆಪಕ್ಷ ವಾರಕ್ಕೊಮ್ಮೆಯಾದರೂ ಪತ್ರವನ್ನು ಬರೆಯಬೇಕು. ಆಗ ಬಾಬಾರವರೂ ಸಹ ಮಕ್ಕಳು ನೆನಪು ಮಾಡುತ್ತಾರೆಂದು ತಿಳಿಯುತ್ತಾರೆ. ಸರ್ವೀಸ್ ಸಮಾಚಾರವನ್ನು ಬರೆಯಬೇಕು- ಬಾಬಾ, ನಾವು ನಿಮ್ಮ ಸೇವೆಯಲ್ಲಿ ನಿರತರಾಗಿದ್ದೇವೆ. ಇಲ್ಲವೆಂದರೆ ಮಾಯೆಯು ಸ್ಮಶಾನವಾಸಿಗಳನ್ನಾಗಿ ಮಾಡಿದೆ ಎಂದು ಬಾಬಾ ತಿಳಿದುಕೊಳ್ಳುತ್ತಾರೆ. ಇಂತಹ ತಂದೆ ಯಾರು ವಿಶ್ವದ ಮಾಲೀಕರನ್ನಾಗಿ ಮಾಡುತ್ತಾರೆಯೋ ಅವರನ್ನೇ ನಿರಂತರವಾಗಿ ನೆನಪು ಮಾಡುವುದಿಲ್ಲ, ಪತ್ರವನ್ನೂ ಬರೆಯುವುದಿಲ್ಲ. ಮಾಯೆಯು ಕೆಲವರನ್ನಂತೂ ಸಂಪೂರ್ಣ ಶವವನ್ನಾಗಿ ಮಾಡಿಬಿಡುತ್ತದೆ. ಬದುಕಿದ್ದರೂ ಪತ್ರವನ್ನು ಬರೆಯುವುದಿಲ್ಲ. ಸತ್ತಮೇಲೆ ಮಾತೇ ಇಲ್ಲ. ಯಾವಾಗ ನಾವು ಪತ್ರವನ್ನು ಬರೆಯುತ್ತೇವೆಯೋ ಆಗಲೇ ತಂದೆಯೂ ಸಹ ಪತ್ರವನ್ನು ಬರೆಯುತ್ತಾರೆ. ಯಾರು ತಂದೆಯನ್ನು ನೆನಪು ಮಾಡುತ್ತಾರೆ ಅವರು ಕರ್ಮಾತೀತ ಸದಾ ಆರೋಗ್ಯವಂತರಾಗುತ್ತಾರೆ. ತಂದೆಯ ಆಸ್ತಿಯಂತೂ ಅವಶ್ಯವಾಗಿ ನೆನಪಿರಬೇಕು, ಸ್ಥಿರವಾದ ನಶೆಯೂ ಸಹ ಏರಿರಬೇಕು. ಈ ಸಮಯದಲ್ಲಿ ನೀವು ಮಕ್ಕಳ ಮುಖವು ನೆನಪಿನಿಂದ ಸಿಹಿಯಾಗಿದೆ. ಈ ವಿಶ್ವ-ರಾಜ್ಯವೆಂಬ ಬೆಣ್ಣೆಯು ನಮಗೆ ಸಿಗುತ್ತದೆ ಎನ್ನುವುದು ಗೊತ್ತಿದೆ. ಕೃಷ್ಣನಿಗೆ ಬಾಯಲ್ಲಿ ಬೆಣ್ಣೆ ತೋರಿಸುತ್ತಾರೆ ಅಂದರೆ ವಿಶ್ವದ ರಾಜ್ಯವೆಂಬ ಬೆಣ್ಣೆಯಾಗಿದೆ. ಯಾರು ಎಷ್ಟು ಮಾಡುತ್ತಾರೆಯೋ ಅಷ್ಟು ಪಡೆಯುತ್ತಾರೆ. ನಮಗೆ ಬಾಬಾನೇ ಓದಿಸುತ್ತಾರೆಂಬುದು ಗೊತ್ತಿದೆ. ಪರಮಪಿತ ಎಂದು ಹೇಳಲಾಗುತ್ತದೆಯಲ್ಲವೆ ಅಂದಮೇಲೆ ಪಿತನಿಂದ ಅವಶ್ಯವಾಗಿ ಆಸ್ತಿಯು ಸಿಗುತ್ತದೆ. ಮಕ್ಕಳು ಬಾಲಕರಾಗಿದ್ದೇವೆಂದು ಹೇಳುತ್ತಾರೆ. ಸಹಜ ರಾಜಯೋಗವನ್ನು ಕಲಿಯುವುದರಿಂದ ನಾವು ಸ್ವರ್ಗದ ಮಾಲೀಕರಾಗುತ್ತೇವೆ. ಈಗ ಮೂರು ಸೇನೆಗಳು ನಿಂತಿವೆ ಎಂದು ತಿಳಿಸಬೇಕು. ವಿನಾಶಕಾಲದಲ್ಲಿ ವಿಪರೀತ ಬುದ್ಧಿಯವರು ಸಮಾಪ್ತಿಯಾದರು. ಯಾರಿಗೆ ಭಗವಂತನ ಜೊತೆ ಪ್ರೀತಿಯಿತ್ತು ಅವರು ವಿಶ್ವದ ಮಾಲೀಕರಾದರು. ಸರ್ಕಾರಕ್ಕೆ ತಿಳಿಸುವುದು ನಮ್ಮ ಕರ್ತವ್ಯವಾಗಿದೆ. ಯಾರೆಲ್ಲಾ ದೊಡ್ಡ-ದೊಡ್ಡ ಅಧಿಕಾರಿಗಳು ನಿಮ್ಮ ಜೊತೆ ಭೇಟಿ ಮಾಡುತ್ತಾರೆಯೋ ಅವರಿಂದಲೂ ಸಹಿಯನ್ನು ಪಡೆದಾಗ ಖುಷಿಯಾಗುತ್ತಾರೆ. ಇವರಂತೂ ಬಹಳ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದಾರೆ. ಪ್ರಯತ್ನ ಪಡಿ. ಇದರಲ್ಲಿ ಸಮಯ ತೆಗೆಯಬೇಕು. ಸರ್ವೀಸನ್ನು ವೃದ್ಧಿ ಮಾಡಲು ಬಹಳ ಯುಕ್ತಿಗಳಿವೆ ಆದರೆ ಮಕ್ಕಳಲ್ಲಿ ಕೆಲವೊಮ್ಮೆ ಅಹಂಕಾರ ಬಂದುಬಿಡುತ್ತದೆ ಅಥವಾ ಆಕರ್ಷಣೆಯಲ್ಲಿ ಬರುವುದರಿಂದ ಬಹಳ ನಷ್ಟಮಾಡಿಕೊಳ್ಳುತ್ತಾರೆ. ಜ್ಞಾನದ ನಶೆಯಿಂದ ಚಹರೆಯು ಸದಾ ಹರ್ಷಿತಮುಖವಾಗಿರಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಗುರಿಯನ್ನು ಮುಂದಿಟ್ಟುಕೊಂಡು ಪುರುಷಾರ್ಥ ಮಾಡಬೇಕು. ದೈವೀಗುಣಗಳನ್ನು ಧಾರಣೆ ಮಾಡಿಕೊಳ್ಳಬೇಕು. ಒಂದು ಕಿವಿಯಿಂದ ಕೇಳಿ ಇನ್ನೊಂದರಿಂದ ಬಿಡಬಾರದು.

2. ವಿಶ್ವದ ರಚೈತ ತಂದೆ ನಮಗೆ ಓದಿಸುತ್ತಿದ್ದಾರೆ, ನಾವು ಅವರ ವಿದ್ಯಾರ್ಥಿಗಳಾಗಿದ್ದೇವೆ- ಈ ನಶೆಯಲ್ಲಿರಬೇಕು. ಸರ್ವೀಸಿನ ಭಿನ್ನ-ಭಿನ್ನ ಯುಕ್ತಿಗಳನ್ನು ತೆಗೆದು ಅದರಲ್ಲಿ ತೊಡಗಿರಬೇಕು.

ವರದಾನ: ತಂದೆ ಕೊಟ್ಟಿರುವಂತಹ ಖಜಾನೆಯನ್ನು ಮನನ ಮಾಡಿ ತಮ್ಮದನ್ನಾಗಿಸಿಕೊಳ್ಳುವಂತಹ ಸದಾ ಹರ್ಷಿತ, ಸದಾ ನಿಶ್ಚಿಂತ ಭವ

ನೀವು ಮಕ್ಕಳ ಮನನ ಮಾಡುವ ಅಥವಾ ಸ್ಮರಣೆ ಮಾಡುವ ಚಿತ್ರ ಭಕ್ತಿಮಾರ್ಗದಲ್ಲಿ ವಿಷ್ಣುವಿನ ರೂಪದಲ್ಲಿ ತೋರಿಸಿದ್ದಾರೆ. ಸರ್ಪವನ್ನು ಶಯ್ಯೆಯಾಗಿ ಮಾಡಿಕೊಂಡು ಅರ್ಥಾತ್ ವಿಕಾರಗಳು ಅಧೀನವಾಗಿಬಿಟ್ಟಹಾಗೆ. ಮಾಯೆಯಿಂದ ಸೋಲನುಭವಿಸುವ, ಯುದ್ಧಮಾಡುವ ಯಾವುದೇ ಚಿಂತೆ ಇಲ್ಲ, ಸದಾ ಮಾಯಾಜೀತ್ ಅರ್ಥಾತ್ ನಿಶ್ಚಿಂತ. ಪ್ರತಿದಿನ ಜ್ಞಾನದ ಹೊಸ-ಹೊಸ ಪಾಯಿಂಟ್ಸ್ ಗಳನ್ನು ಸ್ಮೃತಿಯಲ್ಲಿಟ್ಟು ಮನನ ಮಾಡುತ್ತಿದ್ದರೆ ಬಹಳ ಮಜಾ ಸಿಗುವುದು, ಸದಾ ಹರ್ಷಿತರಾಗಿರುವಿರಿ ಏಕೆಂದರೆ ತಂದೆಯಿಂದ ಕೊಡಲ್ಪಟ್ಟಿರುವ ಖಜಾನೆ ಮನನ

ಮಾಡುವುದರಿಂದ ತನ್ನದೆನ್ನುವ ಅನುಭವವಾಗುವುದು.

ಸ್ಲೋಗನ್: ಸ್ವ ಪರಿವರ್ತಕರು ಯಾರೆಂದರೆ ಯಾರೊಳಗೆ ಸದಾ ಇದೇ ಶುಭ ಭಾವನೆ ಇಮರ್ಜ್ಯರಲಿ ಪ್ರತಿಕಾರ ತೆಗೆದುಕೊಳ್ಳುವುದಿಲ್ಲ ಆದರೆ ಪರಿವರ್ತನೆಯಾಗಿ ತೋರಿಸಬೇಕು.